ಪಿಡಬ್ಯ್ಯೂ -1 ಓ.ಎಸ್.ನಂ. 365/2022

ದಿನಾಂಕಃ 19-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ವಿ ಎಂ ವಕೀಲರಿಂದ

ನಾನು ಏನೂ ಓದಿರುವುದಿಲ್ಲ. ನನಗೆ ಕನ್ನಡ ಇಂಗ್ಲೀಷ್ ಓದಿ ಬರೆಯಲು ಬರುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪ್ರಮಾಣ ಪತ್ರವನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ನಾನು ಹೇಳಿರುತ್ತೇನೆ. ಪ್ರತಿವಾದಿ 1 ಮತ್ತು 2 ರವರು ಅಣ್ಣ ತಮ್ಮಂದಿರು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರಿಗೆ ಬಂದಿರುವ ಸ್ವತ್ತು ಅವರ ತಂದೆ ಖರೀದಿ ಮಾಡಿರುವ ಸ್ವತ್ತು ಎಂದರೆ ಸರಿ. ಪ್ರತಿವಾದಿಯರ ತಂದೆ ದಿಃ24-06-1957 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅವರ ಪ್ರಕಾರ ಅವರೇ ಸ್ವಾಧೀನ ಇದ್ದಾರೆ ಎಂದರೆ ಅವರ ಜಮಿನಿನಲ್ಲಿ ಅವರೇ ಸ್ವಾಧೀನ ಇದ್ದಾರೆ, ಸಾಕ್ಷಿ ಮುಂದುವರಿದು ನಮಗೆ ತೊಂದರೆ ಮಾಡುತ್ತಿರುತ್ತಾರೆ. ದಿಃ15-02-1993 ರಲ್ಲಿ ವಿಭಾಗ ಆಗಿದ್ದು ಆ ವಿಚಾರ ನಿಮಗೆ ಗೊತ್ತು ಎಂದರೆ ಸರಿ. ವಿಭಾಗದಲ್ಲಿ ಸೊಣ್ಣಪ್ಪನಿಗೆ 23 ಗುಂಟೆ ಕೃಷ್ಣಪ್ಪನಿಗೆ 23 ಗುಂಟೆ ಬಂದಿರುತ್ತದೆ ಎಂದರೆ ಸರಿ. ಅದರಂತೆ ಅವರ ಹೆಸರಿನಲ್ಲಿ ಪಹಣಿ ಮತ್ತು ಮುಟೇಷನ್ ಇದೆ ಎಂದರೆ ಸರಿ. ಅದರಂತೆ ಕಂದಾಯವನ್ನುಪಾವತಿ ಮಾಡುತ್ತಿದ್ದಾರೆ ಎಂದರೆ ಕಟ್ಟುತ್ತಿದ್ದಾರೆ. ಆ ಸ್ವತ್ತಿನಲ್ಲಿ ಜೋಳ ಮತ್ತು ಅವರೇ ಗಿಡ ಬೆಳೆ ಇದೆ ಎಂದರೆ ಇಲ್ಲ ಬೀಳು ಬಿಟ್ಟಿರುತ್ತಾರೆ. ಅದರಲ್ಲಿ ಒಂದು ಕಲ್ಲು ಬಾವಿ ಇದೆ ಎಂದರೆ ಇದೆ. ಪ್ರತಿವಾದಿಯವರದ್ದು ಮಿಷನ್ ಶೆಡ್ ಬೋರ್ ವೆಲ್ ಎಲ್ಲಾ ಇದೆ ಎಂದರೆ ಇದೆ. ಆ ಸ್ವತ್ತಿನಲ್ಲಿ 12 ಸಿಲ್ವರ್ ಮರ ತೆಂಗಿನ ಮರ ಇದೆ ಎಂದರೆ ಇತ್ತು ಆದರೆ ಸರ್ವೆ ಮಾಡಿ ನಮಗೆ ಬಂದಿರುತ್ತದೆ. ಆ ಸ್ವತ್ತಿನಲ್ಲಿ ಮರ ಇರುವುದು ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಇಲ್ಲ.

ದಾವಾ ಸರ್ವೆ ನಂ. 20. ನ್ಯಾಯಾಲಯಕ್ಕೆ ಹಾಕಿರುವ ಪಹಣಿ ಪತ್ರಿಕೆ ನಿಪಿ-1 ರಲ್ಲಿ ಪ್ರತಿವಾದಿ 1 ಮತ್ತು 2 ರವರಿಗೆ 23 ಗುಂಟೆ ಇದೆ ಎಂದರೆ ಸರಿ. ಯಲ್ಲಪ್ಪ ಎಂದರೆ ನಿಮ್ಮ ತಮ್ಮ ಎಂದರೆ ಸರಿ. ನಿಮ್ಮ ತಮ್ಮನಿಗೆ 32 ಗುಂಟೆ ತೋರಿಸಿರುತ್ತೀರಿ ಎಂದರೆ ಸಾಕ್ಷಿಯು 1 ಎಕರೆ 30 ಗುಂಟೆ ನನಗೆ 1 ಎಕರೆ 30 ವರೆ ಗುಂಟೆ. ನಿಪಿ-3 ರಲ್ಲಿ ನಿಮ್ಮ ತಮ್ಮನಿಗೆ 32

ಗುಂಟೆ, ನಿಮಗೆ 1 ಎಕರೆ 30 ಗುಂಟೆ ಇದೆ ಎಂದರೆ ನನ್ನ ತಮ್ಮನಿಗೆ 1 ಎಕರೆ 32 ಗುಂಟೆ ಇದೆ ಎಂದು ನುಡಿಯುತ್ತಾರೆ. ದಿ:29-03-1948 ರಲ್ಲಿ ನಿಮ್ಮ ತಂದೆ ಕ್ರಯ ಪತ್ರ ಮಾಡಿಕೊಂಡಿದ್ದು ಆ ಪ್ರಕಾರ 2 ಎಕರೆ 4 ಗುಂಟೆ ಜಮೀನು ಖರೀದಿ ಮಾಡಿರುತ್ತೀರಿ ಎಂದರೆ ನಿಜ. ಅದೇ ರೀತಿ ಸರ್ವೆ ನಂ. 20 ರಲ್ಲಿ 1 ಎಕರೆ 2 ಗುಂಟೆ ಎಂದರೆ ಸರಿ. ಅಸಲು ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಅದು ಕಳೆದುಹೋಗಿರುತ್ತದೆ. ನಾವು ಬೇರೆ ಮನೆಯಲ್ಲಿ ಇದ್ದಾಗ ಕಳೆದುಹೋಗಿರುತ್ತದೆ. ಅದು ಕಳೆದು ಹೋಗಿರುವ ಬಗ್ಗೆ ಪತ್ರಿಕಾ ಪ್ರಕಟಣೆ ಏನೂ ಕೊಟ್ಟಿರುವುದಿಲ್ಲ. ಎರಡೂ ಪತ್ರ ಸೇರಿಕೊಂಡರೆ 2 ಎಕರೆ 4 ಗುಂಟೆ ಮತ್ತು 1 ಎಕರೆ 2 ಗುಂಟೆ ಅಷ್ಟೆ ನಿಮಗೆ ಕ್ರಯ ಪತ್ರ ಅಗಿರುತ್ತದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ಕರಾಬು ಅಂತ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು 20 ಗುಂಟೆ ಇದ್ದು ಅದರಲ್ಲಿ 5 ಗುಂಟೆ ಕರಾಬು ಅಂತ ಕೊಟ್ಟಿರುತ್ತಾರೆ. ನಿಮ್ಮ ಕ್ರಯ ಪತ್ರದಲ್ಲಿ ಕರಾಬು ಅಂತ ತೋರಿಸಿರುವುದಿಲ್ಲ ಎಂದರರೆ ತೋರಿಸಿರುವುದಿಲ್ಲ. ನಿಮ್ಮ ತಮ್ಮ ಯಲ್ಲಪ್ಪ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಮಾಡಿರುವುದಿಲ್ಲ. ನೀವು ಮತ್ತು ಯಲ್ಲಪ್ಪ ದಿ:10-02-2017 ರಲ್ಲಿ ವಿಭಾಗ ಮಾಡಿಕೊಂಡಿದ್ದು ಆ ವಿಭಾಗ ಪತ್ರದ ಪ್ರಕಾರರ ಎ ಷೆಡ್ಯೂಲ್ ಸ್ವತ್ತು ನಿಮಗೆ ಬಂದಿದ್ದು ಅದರಲ್ಲಿ ಸರ್ವೆ ನಂ. 20/2 ಅಂತ ಬಂದಿದೆ ಎಂದರೆ ಸರಿ. ಆ ಪ್ರಕಾರ 3 ಎಕರೆ 18 ಗುಂಟೆ ಬರುವುದಿಲ್ಲ 3 ಎಕರೆ 6 ಗುಂಟೆ ಬರುತ್ತದೆ ಎಂದರೆ ಸಾಕ್ಷಿಯು 3 ಎಕರೆ 21 ಗುಂಟೆ ಬರುತ್ತದೆ. 3 ಎಕರೆ 21 ಗುಂಟೆಗೆ ಪತ್ರ ಇರುತ್ತದೆ ಆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ವಿಭಾಗ ಪತ್ರದ ಐಟಂ ನಂ 2 ರ ಸ್ವತ್ತಿನ ಚೆಕ್ಕುಬಂದಿ ದಕ್ಷಿಣಕ್ಕೆ ಸೊಣ್ಣಪ್ಪ ಮತ್ತು ಕೃಷ್ಣಪ್ಪನ ಸ್ವತ್ತು ಬರುತ್ತದೆ ಎಂದರೆ ಸರಿ. ನಿಮ್ಮ ವಿಭಾಗ ಪತ್ರದಲ್ಲಿ ದಕ್ಷಿಣದ ಕಡೆಗೆ ನಾನೆಪ್ಪ ಅಂತ ಮಾಡಿಕೊಂಡಿರುತ್ತೀರಿ ಎಂದರೆ ನಿಜ ಕೆಳಗಡೆ ಇನ್ನು ಬೇರೆಯವರು ಇರುತ್ತಾರೆ. ಸೊಣ್ಣಪ್ಪ ಮತ್ತು ಕೃಷ್ಣಪ್ಪನವರ ಜಮೀನಿನ ಪಕ್ಕದಲ್ಲಿ ನಾನೆಪ್ಪ ಬರುತ್ತಾರೆ ಎಂದರೆ ಸರಿ.

ಕರಾಬು ನಿಮಗೆ ಬರುತ್ತದೆ ಅಂತ ತೋರಿಸಲು ಪತ್ರ ಮಾಡಿಸಿಕೊಂಡಿರುತ್ತೀರಾ ಎಂದರೆ ಮಾಡಿಕೊಂಡಿರುತ್ತೇವೆ. 21 ಗುಂಟೆ ಕರಾಬು ಮಾಡಿಕೊಳ್ಳಲು ಅರ್ಜಿ ಕೊಟ್ಟಿದ್ದು ಆದೇಶ ಆಗಿರುತ್ತದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ನಿಮ್ಮ ಪ್ರಮಾಣ ಪತ್ರದ 5 ನೇ ಪ್ಯಾರಾದಲ್ಲಿ ಹೇಳಿರುವಂತೆ

ನೀವು ತಹಸೀಲ್ದಾರ್ ರವರ ಬಳಿ ಎ ಕರಾಬ್ ಗೆ ಸಂಬಂದಪಟ್ಟಂತೆ ಅರ್ಜಿ ಕೊಟ್ಟಿದ್ದು ಆ ಅರ್ಜಿ ವಜಾ ಆಗಿದೆ ಅಂತ ಹೇಳಿರುವುದು ಸುಳ್ಳಾ ಎಂದರೆ ಸುಳ್ಳು ಎ ಡಿ ಎಲ್ ಆರ್, ಡಿ ಡಿ ಎಲ್ ಆರ್ ರವರ ಆದೇಶ ಆಗಿತ್ತು ಎಂದರೆ ಸುಳ್ಳು ತಾಲ್ಲೂಕು ಸರ್ವೆಯರ್ ಅನ್ನು ಜಮೀನಿನ ಅಳತೆ ಮಾಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ತೊಂದರೆ ಇದೆ ಅವರ ಜಮೀನು ಅವರು ಅಳತೆ ಮಾಡಿಕೊಳ್ಳಲಿ ಎಂದು ನುಡಿಯುತ್ತಾರೆ. ತಾಲೂಕು ಸರ್ವೆಯರ್ ರವರನ್ನು ನೇಮಕ ಮಾಡಿದರೆ ನಿಮಗೆ ತೊಂದರೆ ಇರುವುದಿಲ್ಲ ಎಂದರೆ ತೊಂದರೆ ಇರುತ್ತದೆ. ಕರಾಬ್ ಜಮೀನು ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಅವರಿಗೆ 5 ಗುಂಟೆ ಸೇರಿದೆ ನಮಗೆ 15 ಗುಂಟೆ ಸೇರಿರುತ್ತದೆ. ಡಿ ಡಿ ಎಲ್ ಆರ್ ರವರು ತಮ್ಮ ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಡಿ ಡಿ ಎಲ್ ಆರ್ ರವರು ಸ್ಥಳ ಪರಿಶೀಲನೆ ಮಾಡಿ ಸರ್ವೆ ಮಾಡಿ ಅದ್ದುಬಸ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೆಲ್ಲಾ ಆದೇಶ ಅದ ಮೇಲೆ ನೀವು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವೆ ಪ್ರತಿವಾದಿಗಳ ಮೇಲೆ ಸುಳ್ಳು ದೂರು ಕೊಟ್ಟು ತೊಂದರೆ ಮಾಡಿರುತ್ತೀರಿ ಎಂದರೆ ಅವರು ನಮಗೆ ತೊಂದರೆ ಮಾಡಿರುತ್ತಾರೆ. ನೀವು ಜಮೀನನ್ನು ಕಬಳಿಕೆ ಮಾಡಿದ್ದು ಕಬಳಿಕೆ ಮಾಡಿದ್ದರಿಂದ ಪ್ರತಿವಾದಿಗಳ ಮೇಲೆ ಗಲಾಟೆ ಮಾಡಿರುತ್ತೀರಿ ಎಂದರೆ ಸುಳ್ಳು ಅದೇ ರೀತಿ ಹೋಗಿ ಪ್ರತಿವಾದಿಗಳ ಮೇಲೆ ವರದಿ ಮಾಡಿರುತ್ತೀರಿ ಎಂದರೆ ಮಾಡಿರುತ್ತೇನೆ. ಪ್ರತಿವಾದಿಯರು ಯಾವುದೇ ತೊಂದರೆ ಕೊಡದೆ ಇದ್ದರೂ ಅವರ ವಿರುದ್ಧ ಸುಳ್ಳು ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.